**37** ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಲಯ, ಬೆಂಗಳೂರು

ಸಿ.ಸಿ. ನಂ. **27369/2018**

ಫ್ರಾ.ಸಃ **1** ಚಾ.ಸಃ **6**

| | |
|---|---|
| ಸಾಕ್ಷಿದಾರರ ಹೆಸರು | ಜಗದೀಶ್ |
| ತಂದೆಯ/ಗಂಡನ ಹೆಸರು | ಸುಕರಾಂ |
| ವಯಸ್ಸು | 55 ವರ್ಷ |
| ಉದ್ಯೋಗ | ಚಾಲಕ |
| ವಿಳಾಸ | ಜಯನಗರ, ಬೆಂಗಳೂರು. |
| ಪ್ರ. ವ. ಬೋ ದಿನಾಂಕ | 16.09.2022. |

<u>ಮುಖ್ಯ ವಿಚಾರಣೆಃ ಮಾನ್ಯ ಹಿ.ಸ.ಸ. ಅ ರವರಿಂದಃ</u>

ಈಗ್ಗೆ 5 ವರ್ಷಗಳ ಹಿಂದೆ ನಾನು ಚಿಕ್ಕನ ಹಳ್ಳಿ ಮುಖ್ಯ ರಸ್ತೆಯಲ್ಲಿರುವ ಪೂಜಾ ಬ್ಯಾಂಕರ್ಸ್ ಬಳಿ ಹೋಗುತ್ತಿದ್ದಾಗ ಪೊಲೀಸರು ನನ್ನನ್ನು ಕರೆಸಿ, ನನ್ನಿಂದ ಒಂದು ದಾಖಲೆಗೆ ಒಂದು ಸಹಿ ಪಡೆದಿದ್ದಾರೆ. ಸದರಿ ದಾಖಲೆ ಅಮಾನತ್ತು ಪಂಚನಾಮೆಯಾಗಿದ್ದು ಅದನ್ನು ನಿಪಿ.1 ಎಂದು ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಆದರೆ ನಿಪಿ.1 ರಲ್ಲಿ ಏನೂ ಬರೆಯಾಗಿದೆ ಎನ್ನುವುದು ನನಗೆ ಗೊತ್ತಿಲ್ಲ ಅದನ್ನು ಓದಿ ತಿಳಿದುಕೊಂಡಿಲ್ಲ. ಪೊಲಿಸೀರು ನನ್ನ ಸಮಕ್ಷಮ ಯಾವುದೇ ಒಡವೆಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಈಗ ನ್ಯಾಯಲಯದ ಮುಂದೆಯಿರುವ ಆರೋಪಿತನನ್ನು ನೋಡಿದರೆ ಗುರುತಿಸಲು ಸಾಧ್ಯವಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಹಿ.ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ. ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲುಃ ಮಾನ್ಯ ಹಿ.ಸ.ಸ.ಅ ರವರಿಂದ</u>

ದಿ. 07/07/2017 ರಂದು ಬೆಳಿಗ್ಗೆ 11 ರಿಂದ 11.45 ಗಂಟೆಗೆ ಮೈಕೋ ಲೇಔಟ್ ಪೊಲೀಸರು ಪೂಜಾ ಬ್ಯಾಂಕರ್ಸ್ ಬಳಿ ಇಬ್ಬರು ಆರೋಪಿಗಳನ್ನು ಕರೆದುಕೊಂಡು ಬಂದು ಸದರಿ ಅರೋಪಿಗಳು ಕಳ್ಳತನ ಮಾಡಿ ಮಾರಾಟ ಮಾಡಿದ್ದ ಎರಡು ಚಿನ್ನದ ಸರಗಳನ್ನು ನಮ್ಮ

ಸಮಕ್ಷಮ ನಿಪಿ.1 ಪಂಚನಾಮೆ ಅಡಿಯಲ್ಲಿ ಅಮಾನತ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪಂಚನಾಮೆಗೆ ನಾನು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ ಈಗ ನ್ಯಾಯಲಯದ ಮುಂದೆಯಿರುವ ಆರೋಪಿತನು ಇದ್ದ ಎಂದರೆ ಸರಿಯಲ್ಲ. ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ)

ಓ.ಹೇ. ಕೇ. ಸ. ಇ. ಒ

**37** ನೇ ಅ.ಮು. ಮ. ದಂ. ನ್ಯಾ